## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 567 (698)

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ :18-08-2025

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು; ಈ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಕೊರತೆ ಎದ್ದು ಕಾಣುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಜಿಲ್ಲಾವಾರು ವಿವರ ನೀಡುವುದು)</td><td>1. ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳ ಸಂಖ್ಯಾವಾರು ವಿವರ ಈ ಕೆಳಕಂಡಂತಿದ್ದು, ಜಿಲ್ಲಾವಾರು ಪಟ್ಟಿಯನ್ನು ಅನುಬಂಧ 01 ಮತ್ತು 02 ರಲ್ಲಿ ಒದಗಿಸಲಾಗಿದೆ:<br><br><table><tr><th>ಶಾಲೆಗಳ ವಿವರ</th><th>ಶಾಲೆಗಳ ಸಂಖ್ಯ</th></tr><tr><td>ಪ್ರಾಥಮಿಕ</td><td>41279</td></tr><tr><td>ಪ್ರೌಢ</td><td>4871</td></tr></table><br>2. ಹೌದು.</td></tr>
<tr><td>(ಆ)</td><td>ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚಿಸಲು ಸರ್ಕಾರವು ಕೈಗೊಂಡ ಕಾರ್ಯಕ್ರಮಗಳೇನು; ವಿಶೇಷವಾಗಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಿ, ಸರ್ಕಾರಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡುವಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳಾವುವು;</td><td>ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1 ನೇ ತರಗತಿಯಿಂದ ಪ್ರಸ್ತುತ ಇರುವ ಕನ್ನಡ /ಇತರೆ ಮಾಧ್ಯಮದ ಜೊತೆಗೆ ಒಟ್ಟು 8538 ಆಂಗ್ಲ (ದ್ವಿಭಾಷಾ) (Bilingual) ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ.<br>• ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 2024-25ನೇ ಸಾಲಿನಲ್ಲಿ ಒಟ್ಟು 59 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ</td></tr>
</table>

| | | |
|---|---|---|
| | | ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಒಟ್ಟು 91 ಶಾಲೆಗಳಲ್ಲಿ 7ನೇ ಮತ್ತು 8ನೇ ತರಗತಿಗೆ ಉನ್ನತೀಕರಿಸಲಾಗಿದೆ (59+91=150) ಮತ್ತು 2025-26ನೇ ಸಾಲಿನಲ್ಲಿ ಒಟ್ಟು 7 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ.<br>• ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ-:ಎಡಿಎಂ2(4)ಶಾ.ಪ್ರಾಂ. 1/2025-26/ 1786476: ದಿನಾಂಕ:27/05/2025 ರಲ್ಲಿ ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಶೈಕ್ಷಣಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕಲಿಕಾ ಶೈಲಿಯ ಬದಲಾವಣೆ, ಆಧುನಿಕ ಕಲಿಕಾ ವಿಧಾನಗಳ ಅಳವಡಿಕೆ, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.<br>• 2025-26ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಪಾಠ ಆಧಾರಿತ ಮೌಲ್ಯಾಂಕನವನ್ನು (Lesson Based Assessment) ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆ ಕೋಠಿಯನ್ನು ಸಿದ್ದಪಡಿಸಿ DSERT Website ನಲ್ಲಿ ಅಳವಡಿಸಲಾಗಿದೆ. ಸದರಿ ಪ್ರಶ್ನೆ ಕೋಠಿಯನ್ನು ಕಲಿಕಾ ಪ್ರಕ್ರಿಯೆಯಿಂದ ಮೌಲ್ಯಾಂಕನ ಪ್ರಕ್ರಿಯೆಯವರೆಗೆ ಎಲ್ಲಾ ಹಂತದಲ್ಲೂ ನಿರಂತರವಾಗಿ ಬಳಸುವ ಸಂಬಂಧ ಹಾಗೂ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಅನುಪಾಲನೆ ಸಂಬಂಧ ಸುತ್ತೋಲೆ, You Tube Live, VC & |

| | | |
|---|---|---|
| | | webinar ಗಳ ಮೂಲಕ ಮಾರ್ಗದರ್ಶನ ನೀಡಲಾಗಿದೆ.<br>• 2025-26 ನೇ ಸಾಲಿನಲ್ಲಿ Foundational Literacy & Numeracy (FLN) ಅನ್ನು ಇನ್ನೂ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡುವ ಸಂಬಂಧ NCERT ಯಿಂದ ಆರಂಭಿಕ ಸಾಕ್ಷರತೆಗೆ 09 ಹಾಗೂ ಸಂಖ್ಯಾಜ್ಞಾನಕ್ಕೆ 08 ಕಲಿಕಾ ಫಲಗಳನ್ನು ಒಳಗೊಂಡಂತೆ, ಪರಿಷ್ಕೃತ 17 ಕಲಿಕಾ ಫಲಗಳನ್ನು ರೂಪಿಸಲಾಗಿದೆ.<br>• ಮಕ್ಕಳನ್ನು ಗುರುತಿಸಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದಲ್ಲಿ FLN ಕೋಶ ಸ್ಥಾಪಿಸಿ ಈ ಮೂಲಕ ಕಾರ್ಯಕ್ರಮಗಳನ್ನು ಅನುಪಾಲನೆ ಮಾಡಲಾಗುತ್ತಿದೆ.<br>• **ಓದು ಕರ್ನಾಟಕ:** 4 ಮತ್ತು 5 ನೇ ತರಗತಿ ವಿದ್ಯಾರ್ಥಿಗಳಲ್ಲಿ ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನವನ್ನು ಉತ್ತಮಪಡಿಸುವ ಉದ್ದೇಶದಿಂದ 2025-26 ನೇ ಸಾಲಿನಲ್ಲಿ **"ಓದು ಕರ್ನಾಟಕ"** ಕಾರ್ಯಕ್ರಮವನ್ನು ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ 4 ಮತ್ತು 5 ನೇ ತರಗತಿ ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆಯಲಿದ್ದಾರೆ.<br>• **ಜ್ಞಾನಸೇತು:** 1 ರಿಂದ 12 ನೇ ತರಗತಿವರೆಗಿನ ಸರ್ಕಾರಿ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಕಲಿಕೆಗಾಗಿ **'ಜ್ಞಾನಸೇತು'** ಕಾರ್ಯಕ್ರಮವನ್ನು 2025-26 ನೇ ಸಾಲಿನಲ್ಲಿ ಖಾನ್ ಅಕಾಡೆಮಿ ಸಹಯೋಗದೊಂದಿಗೆ ಅನುಷ್ಠಾನಿಸಲಾಗುತ್ತಿದೆ. ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಿಗೆ ಸಂಬಂಧಿಸಿದ ಡಿಜಿಟಲ್ ಸಂಪನ್ಮೂಲಗಳನ್ನು 21726 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ 4871 ಸರ್ಕಾರಿ ಪ್ರೌಢ ಶಾಲೆಗಳ |

| | | |
|---|---|---|
| | | ಹಾಗೂ 1229 ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಲಿದ್ದಾರೆ.<br>• **ದೀಕ್ಷಾ:** 2025-26ನೇ ಸಾಲಿನಲ್ಲಿ ಡಯಟ್ ನೋಡಲ್ ಅಧಿಕಾರಿಗಳಿಗೆ 'ಕಂಟೆಂಟ್ ಕ್ಲೀನಿಂಗ್' ಕಾರ್ಯಾಗಾರವನ್ನು ಹಮ್ಮಿಕೊಂಡು ದೀಕ್ಷಾ ದಲ್ಲಿನ ಕಂಟೆಂಟ್ ನ್ನು ಪರಿಶೀಲಿಸಿ, ಪ್ರಸಕ್ತ ಪಠ್ಯಾಧಾರಿತ ಕಂಟೆಂಟ್ ನ್ನು ಪಠ್ಯಪುಸ್ತಕದ QR Code ಗಳಿಗೆ ಮ್ಯಾಪಿಂಗ್ ಮಾಡಿಸಲಾಗುತ್ತದೆ.<br>• ಶಿಕ್ಷಕರಿಗೆ ತಂತ್ರಜ್ಞಾನ ಬಳಕೆ ಸಂಬಂಧ Induction & TALP ತರಬೇತಿ ನೀಡಲಾಗಿದ್ದು, ಶಿಕ್ಷಕರು ಅಂತರ್ಜಾಲವನ್ನು ಇಂದೀರಿಸುವ ಜ್ಞಾನ ಹೊಂದಿರುತ್ತಾರೆ.<br>• ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP)ವನ್ನು ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 2016-17ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು ಈ ಕಾರ್ಯಕ್ರಮದಡಿ 4687 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು 3463 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರೊಜೆಕ್ಟರ್ ಒದಗಿಸಲಾಗಿದೆ. 3069 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಒದಗಿಸಲಾಗಿದೆ. 2025-26ನೇ ಸಾಲಿನಲ್ಲಿ 218 ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಸದರಿ ಉಪಕರಣಗಳನ್ನು ಬಳಸಿಕೊಂಡು ಇ-ಸಂಪನ್ಮೂಲಗಳನ್ನು ಸೃಜಿಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲಾಗುತ್ತಿದೆ.<br>• ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ Digital Skill ಬಳಕೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ತರಬೇತಿಯನ್ನು ನೀಡುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.<br>• ಟ್ಯಾಲ್ಪ್ ಯೋಜನೆಯಡಿ ತಂತ್ರಜ್ಞಾನ ಬಳಕೆಯ |

| | | |
|---|---|---|
| | | ಬಗ್ಗೆ 38632 ಶಿಕ್ಷಕರಿಗೆ ಇಂಡಕ್ಷನ್ ತರಬೇತಿಯನ್ನು ಹಾಗೂ 9644 ಶಿಕ್ಷಕರಿಗೆ ರಿಫ್ರೆಷರ್ ತರಬೇತಿಯನ್ನು ನೀಡಲಾಗಿದೆ.<br>• 2024-25ನೇ ಸಾಲಿನಲ್ಲಿ ಸ್ವಯಂ ಸೇವಾ ಸಂಸ್ಥೆ Ekstep ಸಹಕಾರದೊಂದಿಗೆ Artificial Intelligence ಬಳಸಿಕೊಂಡು ರಾಜ್ಯದ 2593 ಶಾಲಾ ಕಾಲೇಜುಗಳಲ್ಲಿ 4 ಮತ್ತು 12 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **"ಕಲಿಕಾದೀಪ"** ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br>• 2024-25ನೇ ಸಾಲಿನಲ್ಲಿ ಆಯವ್ಯಯ ಘೋಷಿಕ ಕಂಡಿಕೆ 96(ಡಿ) ಅಡಿ 250 ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಸೌಲಭ್ಯವನ್ನು ಅನುಷ್ಠಾನಿಸಿ ಪ್ರಯೋಗಾಲಯ ನಿರ್ವಹಣೆ ಕುರಿತು ಪ್ರಯೋಗದರ್ಶಿ ಎಂಬ ಕೈಪಿಡಿಯನ್ನು ಸಿದ್ಧಪಡಿಸಿ ಸಂಬಂಧಿಸಿದ ಶಾಲೆಗಳ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ತಾರ್ಕಿಕ ಚಿಂತನಾ ಕೌಶಲಗಳು ವೃದ್ಧಿಯಾಗಲಿವೆ.<br>• ಡಿ.ಎಸ್.ಇ.ಆರ್.ಟಿ ಕಛೇರಿಯ ಇ.ಟಿ.ಸಿ ವಿಭಾಗದಿಂದ 2016-17 ರಿಂದ 2024-25ನೇ ಸಾಲಿನವರೆಗೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಎಂ.ಆರ್.ಪಿ ಹಾಗೂ DIET Faculties ಶಿಕ್ಷಕರುಗಳು ಸೇರಿಂತೆ ಒಟ್ಟು 48276 ಶಿಕ್ಷಕರುಗಳಿಗೆ Induction-1 ಮತ್ತು Refresher ತರಬೇತಿಗಳನ್ನು ನೀಡಿ ಶಿಕ್ಷಕರ ಗುಣಮಟ್ಟವನ್ನು ಉತ್ತಮಪಡಿಸಲಾಗಿರುತ್ತದೆ. ಹಾಗೂ 2025-26ನೇ ಸಾಲಿನಲ್ಲಿ TGT ಶಿಕ್ಷಕರು, GPT ಶಿಕ್ಷಕರು, Garde-1 ಮುಖ್ಯಶಿಕ್ಷಕರು ಸೇರಿದಂತೆ ಒಟ್ಟು 20600 ಶಿಕ್ಷಕರುಗಳಿಗೆ Induction ಮತ್ತು Refresher ತರಬೇತಿಯನ್ನು ನೀಡಲು ಕ್ರಿಯಾಯೋಜನೆಯನ್ನು |

| | | |
|---|---|---|
| | | ಸಿದ್ಧಪಡಿಸಿಕೊಂಡಿದ್ದು, ಶಿಕ್ಷಕರಿಗೆ ತರಬೇತಿ ನೀಡಿ ಗುಣಮಟ್ಟದ ಶಿಕ್ಷಣ ನೀಡಲು ಕ್ರಮವಹಿಸಲಾಗುತ್ತಿದೆ<br>• ಪ್ರತಿ ವರ್ಷ ಸದರಿ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರುಗಳಿಗೆ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ.( Learning outcome based) 2024-25 ನೇ ಸಾಲಿನಲ್ಲಿ 1 ರಿಂದ 6 ನೇ ತರಗತಿಯನ್ನು ಬೋಧಿಸುವ 8707 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. 2025-26 ನೇ ಸಾಲಿನಲ್ಲಿ 10260 ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿದೆ.<br>• 2024-25ನೇ ಸಾಲಿನಲ್ಲಿ 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿದ ಶಾಲೆಯ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>• 2025-26 ನೇ ಸಾಲಿನಲ್ಲಿ 7 ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ ಈ ತರಬೇತಿಗಳು ಶಾಲಾ ಮಕ್ಕಳಿಗೆ ಗುಣಾತ್ಮಕ ಪ್ರಾಥಮಿಕ ಶಿಕ್ಷಣವನ್ನು ನೀಡುವಲ್ಲಿ ಹಾಗೂ ಗಣನೀಯವಾಗಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಸಹಕಾರಿಯಾಗಿವೆ.<br>• 2025-26 ನೇ ಸಾಲಿನಲ್ಲಿ 28 ಜಿಲ್ಲೆಗಳ ಶಿಕ್ಷಕರಿಗೆ ಮರುಸಿಂಚನ (6 ರಿಂದ 10ನೇ ತರಗತಿಗೆ) ತರಬೇತಿ, ರಾಜ್ಯದ ಎಲ್ಲಾ ಜಿಲ್ಲೆಯ 3 ರಿಂದ 5 ತರಗತಿಗೆ ಗಣಿತ ಬೋಧಿಸುವ ಶಿಕ್ಷಕರಿಗೆ ಗಣಿತ ಗಣಕ ತರಬೇತಿ, ಗಣಿತ ಕಲಿಕಾ ಆಂದೋಲನಾ ತರಬೇತಿ, ಆದಿವಾಸಿ ವಸತಿ ಶಾಲೆಯ ಶಿಕ್ಷಕರಿಗೆ ತರಬೇತಿ, ನಲಿಕಲಿ ತರಬೇತಿ, ಪ್ರೌಢ ಶಾಲಾ ಶಿಕ್ಷಕರಿಗೆ ಗಣಿತ ಮತ್ತು ವಿಜ್ಞಾನ |

ತರಬೇತಿಯನ್ನು ಐಐಎಸ್‌ಸಿ, ಚಳ್ಳಕೆರೆಯಲ್ಲಿ ನೀಡಲಾಗುವುದು. ಇವು ಶಿಕ್ಷಕರ ಮುಖಾಂತರ ವಿದ್ಯಾರ್ಥಿಗಳಿಗೆ ತಲುಪುತ್ತಿದೆ. ಇದು ಗುಣಮಟ್ಟದ ಶಿಕ್ಷಣ ಹೆಚ್ಚಳಕ್ಕೆ ಸಹಾಯ ಮಾಡುತ್ತಿದೆ

- 2023-24 ನೇ ಶೈಕ್ಷಣಿಕ ಸಾಲಿನಲ್ಲಿ 'ಕಲಿಕಾ ಬಲವರ್ಧನೆ' ಕಾರ್ಯಕ್ರಮದಡಿ 1 ರಿಂದ 9 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಚಟುವಟಿಕೆ ಪುಸ್ತಕ ಮತ್ತು ಶಿಕ್ಷಕರಿಗೆ ಚಟುವಟಿಕೆ ಕೋಶಗಳ ರಚನೆ ಮತ್ತು ಭಾಷಾಂತರ ಮಾಡಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ ಹಾಗೂ ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಮಾರ್ಗದರ್ಶನ ನೀಡಿದೆ.
- ಸಂಭ್ರಮ ಶನಿವಾರ (No Bag Day) ಕಾರ್ಯಕ್ರಮವನ್ನು ಬ್ಯಾಗ್ ಹೊರೆ ತಗ್ಗಿಸಲು ಹಾಗೂ ಸಹ ಪಠ್ಯ ಚಟುಟಿಕೆಗಳ ಮೂಲಕ ಮಕ್ಕಳಲ್ಲಿ ನಾಗರೀಕ ಪ್ರಜ್ಞೆಯನ್ನು ಮೂಡಿಸಲು ಮತ್ತು ವೃತ್ತಿ ಕೌಶಲವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲಿ 10 ದಿನಗಳ ಬ್ಯಾಗ್ ರಹಿತ ದಿನಗಳನ್ನು ಆಚರಿಸಲಾಗುತ್ತಿದೆ.

1 ರಿಂದ 8ನೇ ತರಗತಿಯವರೆಗೆ ಪಾಠ ಆಧಾರಿತ ಚಿತ್ರ ಸಹಿತ ದ್ವಿಭಾಷಾ ನಿಘಂಟು ಸಿದ್ಧಪಡಿಸಿ (Bilingual Dictionary) 100 ಶಾಲೆಗಳಲ್ಲಿ Pilot ಮಾಡಲಾಗುತ್ತಿದೆ.

**ಸರ್ಕಾರಿ ಶಾಲಾ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಲು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.**

1. ಶಾಲಾ ಲಭ್ಯತೆಯಿಲ್ಲದ ಪ್ರದೇಶಗಳಿಂದ ಸಮೀಪದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ದಾಖಲಾಗಿ ವ್ಯಾಸಂಗ

| | | |
|---|---|---|
| | | ಮಾಡುತ್ತಿರುವ ಮಕ್ಕಳಿಗೆ ಕೇಂದ್ರ ಶಿಕ್ಷಣ ಮಂತ್ರಾಲಯದ ಮಾನದಂಡಗಳ ಪ್ರಕಾರ ಸಾರಿಗೆ ಮತ್ತು ಬೆಂಗಾವಲು ಭತ್ಯೆಯನ್ನು ನೀಡಲಾಗುತ್ತಿದೆ. ಅರ್ಹ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ. 600/-ರಂತೆ 10 ತಿಂಗಳಿಗೆ ರೂ 6000/- ಸಾರಿಗೆ ಭತ್ಯೆ ನೀಡಲಾಗುತ್ತಿದೆ.<br>2. ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದ ಮೇಲ್ಪಟ್ಟ ವಿಭಾಗಗಳಿಗೆ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ 2018-19ನೇ ಸಾಲಿನಿಂದ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದ್ದು ಪ್ರಸ್ತುತ 2619 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ನಡಸಲಾಗುತ್ತಿದ್ದು 2025-26ನೇ ಸಾಲಿಗೆ 5000 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ವಿಭಾಗ ವಿಸ್ತರಿಸಲು ಯೋಜಿಸಲಾಗಿದೆ.<br>3. ಆಯ್ದ ಪ್ರೌಢ ಶಾಲೆಗಳಲ್ಲಿ 2014-15ನೇ ಸಾಲಿನಿಂದ ವೃತ್ತಿ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಇದರ ಜೊತೆಗೆ ವೃತ್ತಿ ಮಾರ್ಗದರ್ಶನ ತರಬೇತಿಗಳನ್ನು ನೀಡಲಾಗುತ್ತಿದೆ.<br>4. 2019-20ನೇ ಸಾಲಿನಿಂದ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ.<br>5. 2018-19ನೇ ಸಾಲಿನಿಂದ ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವ ತರಗತಿವರೆಗೆ ಒಂದೇ ಸೂರಿನಡಿ ಗುಣಮಟ್ಟ ಶಿಕ್ಷಣ ನೀಡಲು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ 308 ಕೆ.ಪಿ.ಎಸ್ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>6. ಹೆಣ್ಣು ಮಕ್ಕಳ ಶಿಕ್ಷಣ ಪ್ರೋತ್ಸಾಹಿಸಲು 76 ಕೆ.ಜಿ.ಬಿ.ವಿ ವಸತಿ ಶಾಲೆಗಳು, 72 ಕೆ.ಜಿ.ಬಿ.ವಿ ವಸತಿ ನಿಲಯಗಳು/ ರಾಜ್ಯ ಸರ್ಕಾರದ ಅನುದಾನದಡಿ 72 ಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳನ್ನು |

| | | |
|---|---|---|
| | | ನಡೆಸಲಾಗುತ್ತಿದೆ.<br>7. ದುರ್ಬಲ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ 06 ನೇತಾಜಿ ಸುಬಾಷ್ ಚಂದ್ರ ಬೋಸ್ ಆವಾಸಿಯ ವಿದ್ಯಾಲಯಗಳನ್ನು ನಡೆಸಲಾಗುತ್ತಿದೆ.<br>8. ರಾಜ್ಯ ಸರ್ಕಾರದ ಅನುದಾನದಡಿ ಒಟ್ಟು 74 ಆದರ್ಶ ವಿದ್ಯಾಲಯಗಳನ್ನು ಸ್ಥಾಪಿಸಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ.<br>9. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ವಿಶೇಷವಾಗಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಹಾಗೂ ಸ್ಮಾರ್ಟ್ ಕ್ಲಾಸ್ ಮೂಲಕ ತರಗತಿಗಳನ್ನು ನಿರ್ವಹಿಸಲಾಗುತ್ತಿದೆ.<br>10. ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಹಾಗೂ ಶೈಕ್ಷಣಿಕ ಗುಣಮಟ್ಟ ಸುಧಾರಣೆಗಾಗಿ ಪೂರ್ವ ಪ್ರಾಥಮಿಕ ಶಿಕ್ಷಣದ ಮಕ್ಕಳಿಗೆ ECCE ಕಿಟ್ 1,2& 3ನೇ ತರಗತಿ ವಿದ್ಯಾರ್ಥಿಗಳಿಗೆ ನಲಿ-ಕಲಿ ಕಲಿಕಾ ಸಾಮಗ್ರಿಗಳೂ 4 ರಿಂದ 8ನೇ ತರಗತಿಗೆ ಗಣಿತ ಮತ್ತು ವಿಜ್ಞಾನ ಕಿಟ್ ಒದಗಿಸಲಾಗುತ್ತಿದೆ. |
| (ಇ) | ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳು ಶುಚಿತ್ವದಿಂದ ಕೂಡಿರದೇ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ತೊಂದರೆಯಾಗುತ್ತಿರುವುದು ಮತ್ತು ದುರ್ವಾಸನೆಯ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 1. ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ 2024-25ನೇ ಸಾಲಿಗೆ ರೂ.5798.32ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br>2. ಅನುದಾನ ಬಿಡುಗಡೆ ಆದೇಶದಲ್ಲಿ ಸದರಿ ಅನುದಾನವನ್ನು ಪ್ರಥಮ ಆದ್ಯತೆಯ ಮೇರೆಗೆ ಶೌಚಾಲಯ ನಿರ್ವಹಣೆಗೆ ಬಳಸಿಕೊಂಡು, ನೈರ್ಮಲ್ಯಕ್ಕೆ ಪ್ರಥಮ ಆದ್ಯತೆ ನೀಡುವಂತೆ, ಸೂಚಿಸಲಾಗಿರುತ್ತದೆ. |

<table>
<tr>
<td>(ಈ)</td>
<td>ಸರ್ಕಾರಿ ಶಾಲೆಗಳು ಹಳೇ ಕಟ್ಟಡಗಳಿಂದ ಕೂಡಿದ್ದು, ಅಭಿವೃದ್ಧಿಗಾಗಿ ಸರ್ಕಾರವು ಕೊಡುವ ಒತ್ತುಗಳೇನು ಹಾಗೂ ಯಾವ ಕಾಲಮಿತಿ ಒಳಗೆ ಅಭಿವೃದ್ಧಿಗೊಳಿಸಲು ಕ್ರಮವಹಿಸಲಾಗುವುದು;</td>
<td>ಸರ್ಕಾರಿ ಶಾಲೆಗಳಿಗೆ ಕೊಠಡಿ ನಿರ್ಮಾಣ ಮತ್ತು ದುರಸ್ತಿಗಾಗಿ 2024-25 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.
<ul>
<li>ರಾಜ್ಯವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳ 784 ಕೊಠಡಿಗಳ ನಿರ್ಮಾಣಕ್ಕಾಗಿ ರೂ. 11529.25ಲಕ್ಷಗಳು ಮಂಜೂರಾಗಿದ್ದು, ಇದರಲ್ಲಿ ರೂ.10362.47ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.</li>
<li>5838 ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ದುರಸ್ತಿಗಾಗಿ ರೂ. 15299.66ಲಕ್ಷಗಳ ಅನುದಾನ ಮಂಜೂರಾಗಿದ್ದು, ರೂ. 15299.66 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.</li>
<li>ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ 7650 ಶೌಚಾಲಯಗಳ ನಿರ್ಮಾಣಕ್ಕಾಗಿ 2024-25ನೇ ಸಾಲಿನಲ್ಲಿ ರೂ.12106.05 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.</li>
<li>ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಶಾಲಾ ಕೊಠಡಿ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣವನ್ನು ಅನುದಾನದ ಲಭ್ಯತೆಯನ್ನಾಧರಿಸಿ, ಅವಶ್ಯಕತೆ ಇರುವ ಕಡೆ ಆದ್ಯತೆ ಮೇರೆಗೆ ಹಂತ-ಹಂತವಾಗಿ ಒದಗಿಸಲು ಕ್ರಮ ವಹಿಸಿದ್ದು, 2025-26ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣ ಹಾಗೂ ಶೌಚಾಲಯ ಮತ್ತು ಇತರೆ ನಿರ್ವಹಣೆಗಾಗಿ ಆಯವ್ಯಯದಲ್ಲಿ ಈ ಕೆಳಗಿನಂತೆ ಅನುದಾನ ನಿಗದಿಯಾಗಿರುತ್ತದೆ.</li>
</ul>
<table>
<tr><td colspan="3">ರೂ. ಲಕ್ಷಗಳಲ್ಲಿ</td></tr>
<tr><th>ಕ್ರ ಸಂ</th><th>ಯೋಜನೆ/ಕಾರ್ಯಕ್ರಮ</th><th>ನಿಗದಿಯಾಗಿರುವ ಅನುದಾನ</th></tr>
<tr><td>1</td><td>ಕೊಠಡಿ ನಿರ್ಮಾಣ</td><td>39952.57</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>2</td><td>ಕೊಠಡಿ ದುರಸ್ಥಿ</td><td>10000.00</td></tr>
<tr><td>3</td><td>ಶೌಚಾಲಯ ನಿರ್ಮಾಣ</td><td>9000.00</td></tr>
<tr><td>4</td><td>ಶೌಚಾಲಯ ಮತ್ತು ಇತರೆ ನಿರ್ವಹಣೆಗಾಗಿ</td><td>5329.00</td></tr>
<tr><td>5</td><td>ಪೀಠೋಪಕರಣ</td><td>5000.00</td></tr>
<tr><td></td><td>ಒಟ್ಟು</td><td>69281.57</td></tr>
</table>
</td>
</tr>
<tr>
<td>(ಉ)</td>
<td>ರಾಜ್ಯದಲ್ಲಿ ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳು ಎಷ್ಟು; ಈ ಶಿಕ್ಷಕರುಗಳಿಗೆ ಇರುವ ಸೌಲಭ್ಯಗಳೇನು: (ಪೂರ್ಣ ವಿವರ ನೀಡುವುದು)</td>
<td>
ರಾಜ್ಯದ ಅನುದಾನಿತ/ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ವಿವರ ಈ ಕೆಳಕಂಡಂತಿದೆ:
<table>
<tr><th>ಶಾಲೆಯ ವಿಧ</th><th>ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ</th></tr>
<tr><td>ಅನುದಾನಿತ ಪ್ರಾಥಮಿಕ ಶಾಲೆ</td><td>10043</td></tr>
<tr><td>ಅನುದಾನರಹಿತ ಪ್ರಾಥಮಿಕ ಶಾಲೆ</td><td>51399</td></tr>
<tr><td>ಅನುದಾನಿತ ಪ್ರೌಢ ಶಾಲೆ</td><td>25257</td></tr>
<tr><td>ಅನುದಾನರಹಿತ ಪ್ರೌಢ ಶಾಲೆ</td><td>83628</td></tr>
</table>
ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಕಾಲಕಾಲಕ್ಕೆ ಬಡ್ತಿ, ಕಾಲಮಿತಿ ಬಡ್ತಿ, ಸ್ವಯಂ ಚಾಲಿತ ಬಡ್ತಿ, 20, 25 ಹಾಗೂ 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿಗಳನ್ನು ಆಡಳಿತ ಮಂಡಳಿ ಮಂಜೂರು ಮಾಡಿ ಅನುಮೋದನೆಗೆ ಸಲ್ಲಿಸುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾದಿಂದ ಅನುಮೋದನೆ ನೀಡಿ ಶಿಕ್ಷಕರುಗಳಿಗೆ ದೊರಕುವ ವಿವಿಧ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.
</td>
</tr>
</table>

| | | |
|---|---|---|
| | | **ಖಾಸಗಿ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಶಿಕ್ಷಕರುಗಳಿಗೆ** ಸೇವಾಭದ್ರತೆ ಕನಿಷ್ಟ ಮೂಲ ವೇತನ ಮತ್ತು ಇತರೆ ಭತ್ಯೆಗಳನ್ನು ಶಿಕ್ಷಣ ಕಾಯ್ದೆ ನಿಯಮಗಳನ್ವಯ ನೀಡಲು ಆಡಳಿತ ಮಂಡಳಿಗಳಿಗೆ ದಿನಾಂಕ:16-12-2019ರ ಸುತ್ತೋಲೆ ಮೂಲಕ ತಿಳಿಸಲಾಗಿರುತ್ತದೆ. |
| (ಊ) | ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿನ ಶಿಕ್ಷಕರುಗಳು ಹಲವು ರೀತಿಯ ಬೇಡಿಕೆ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸಮಸ್ಯೆಗಳನ್ನು ಈಡೇರಿಸುವಲ್ಲಿ ಸರ್ಕಾರದ ಕ್ರಮವೇನು; | ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಶಿಕ್ಷಕರುಗಳು ಅನುದಾನರಹಿತ ಸೇವೆಯ ಅವಧಿಗೆ ವೇತನ ಸೌಲಭ್ಯವನ್ನು ನೀಡುವಂತೆ ಕೋರಿರುತ್ತಾರೆ. ಅನುದಾನ ರಹಿತವಾಗಿ ಸಲ್ಲಿಸಿರುವ ಸೇವೆಯನ್ನು ಅರ್ಹ ಸೇವೆಯೆಂದು ಪರಿಗಣಿಸಲು 2014ರ ಕಾಯ್ದೆಯ ಪ್ರಕಾರ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>ಖಾಸಗಿ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಶಿಕ್ಷಕರುಗಳು ಕನಿಷ್ಟ ಮೂಲ ವೇತನ ಪಾವತಿ/ಸೇವಾ ಭದ್ರತೆಯನ್ನು ಕೋರಿ ಮನವಿ ಸಲ್ಲಿಸುತ್ತಿರುತ್ತಾರೆ.<br><br>ಈ ಕುರಿತು ಶಿಕ್ಷಣ ಕಾಯ್ದೆ ನಿಯಮಗಳನ್ವಯ ಶಿಕ್ಷಕರ ವೇತನ ಶ್ರೇಣಿಯ ಕನಿಷ್ಟಕ್ಕಿಂತ ಕಡಿಮೆ ಇಲ್ಲದಷ್ಟು ವೇತನ ಪಾವತಿಸಲು ಹಾಗೂ ಸೇವಾ ಭದ್ರತೆ ನೀಡಲು ಆಡಳಿತ ಮಂಡಳಿಗಳಿಗೆ ಸುತ್ತೋಲೆ ದಿ:16-12-2019 ಮೂಲಕ ತಿಳಿಸಲಾಗಿರುತ್ತದೆ. |
| (ಋ) | ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರುಗಳಿಗೆ ಕಾಲಕಾಲಕ್ಕೆ ಮುಂಬಡ್ತಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಹೌದು.<br>**ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಬಡ್ತಿಗೆ ಸಂಬಂಧಿಸಿದಂತೆ:-**<br>• ಆರ್.ಟಿ.ಇ ಮತ್ತು ಎನ್.ಸಿ.ಟಿ.ಇ ಮಾನದಂಡಗಳನ್ನು ಆಧರಿಸಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಗಿರುತ್ತದೆ. |

| | | |
|---|---|---|
| | | • Karnataka Education Department Service (Department of Public Instrution) (Recruitment) (Amendment) Rules, 2017 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ಹಾಗೂ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 626 ಪಿಬಿಎಸ್ 2014. ದಿನಾಂಕ :17.08.2017 ರಿಂದ ಜಾರಿಗೆ ಬಂದಿದೆ. ಈ ಅಧಿಸೂಚನೆ ಪ್ರಕಾರ 75:25 ನೇರ ನೇಮಕಾತಿ ಮತ್ತು ಸೇವಾನಿರತ ಕೋಟಾದಡಿ ನೇಮಕಾತಿಗೆ ಅವಕಾಶವಿರುತ್ತದೆ.<br><br>• ಸದರಿ ಅಧಿಸೂಚನೆ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ವೃಂದದಿಂದ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದಕ್ಕೆ ಸೇವಾ ನಿರತರ ಕೋಟಾದಡಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ ಹೊಂದಲು ಅವಕಾಶವಿರುತ್ತದೆ.<br><br>• ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 94 ಪಿಬಿಎಸ್ 2018 (ಭಾ-3), ದಿನಾಂಕ 10.12.2021 ರಂತೆ 67:33 ನೇರ ನೇಮಕಾತಿ ಮತ್ತು ಸೇವಾನಿರತ ಕೋಟಾದಡಿ ನೇಮಕಾತಿಗೆ ಅವಕಾಶ ಕಲ್ಪಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲಾಗಿದೆ.<br><br>• ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಸೇವಾ ನಿರತರ ಕೋಟಾದಡಿ ಪರೀಕ್ಷೆ ಮೂಲಕ ನೇಮಕಾತಿ ಹೊಂದಬೇಕೆಂಬ ಷರತ್ತನ್ನು ಪರಿಷ್ಕರಿಸಿ ಸೇವಾ ಜೇಷ್ಠತೆ ಮೂಲಕ ಬಡ್ತಿಗೆ ಅವಕಾಶ ಕಲ್ಪಿಸಲು |

| | | |
|---|---|---|
| | | ಕೋರಿಕೆ ಸಲ್ಲಿಸಿ ಸೇವಾನಿರತರ ಕೋಟಾದಡಿ ನೇಮಕಾತಿ ಅವಕಾಶವನ್ನು ಬಳಕೆ ಮಾಡಿಕೊಂಡಿರುವುದಿಲ್ಲ.<br><br>**ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಬಡ್ತಿಗೆ ಸಂಬಂಧಿಸಿದಂತೆ:-**<br>• ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಪ್ರೌಢಶಾಲಾ ಸಹ ಶಿಕ್ಷಕರ ವೃಂದಕ್ಕೆ ಬಡ್ತಿ ಸಂಬಂಧ ನಿಂದನಾ ದಾವೆ ಸಂಖ್ಯೆ: 667-697/2024 164-274/2025 57-165/2025 ಚಾಲ್ತಿಯಲ್ಲಿರುವುದರಿಂದ ಸದರಿ ದಾವೆಗಳು ಮುಕ್ತಾಯಗೊಂಡ ನಂತರ ಬಡ್ತಿ ಸಂಬಂಧ ನಿಯಮಾನುಸಾರ ಕ್ರಮವಹಿಸಲಾಗುವುದು. |

**ಇಪಿ 98 ಪಿಎಂಎ 2025**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

## ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಪ್ರಾಥಮಿಕ ಶಾಲೆಗಳ ಸಂಖ್ಯೆ

| Sl.No | District Name | Govt | | | Aided | | | Unaided | | |
|---|---|---|---|---|---|---|---|---|---|---|
| | | LPS | HPS | Total | LPS | HPS | Total | LPS | HPS | Total |
| 1 | BAGALKOT | 447 | 787 | 1234 | 6 | 98 | 104 | 148 | 200 | 348 |
| 2 | BALLARI | 229 | 366 | 595 | 1 | 39 | 74 | 83 | 167 | 250 |
| 3 | BELAGAVI | 512 | 830 | 1342 | 5 | 49 | 259 | 87 | 140 | 227 |
| 4 | BELAGAVI CHIKKODI | 692 | 1031 | 1723 | 14 | 143 | 309 | 84 | 281 | 365 |
| 5 | BENGALURU RURAL | 601 | 425 | 1026 | 0 | 14 | 62 | 4 | 61 | 65 |
| 6 | BENGALURU U NORTH | 217 | 257 | 474 | 0 | 92 | 199 | 35 | 282 | 317 |
| 7 | BENGALURU U SOUTH | 394 | 447 | 841 | 4 | 123 | 260 | 69 | 429 | 498 |
| 8 | BIDAR | 494 | 710 | 1204 | 4 | 193 | 338 | 180 | 320 | 500 |
| 9 | CHAMARAJANAGARA | 310 | 404 | 714 | 5 | 31 | 90 | 23 | 61 | 84 |
| 10 | CHIKKABALLAPURA | 849 | 511 | 1360 | 0 | 43 | 84 | 11 | 80 | 91 |
| 11 | CHIKKAMANGALURU | 603 | 640 | 1243 | 0 | 20 | 116 | 20 | 84 | 104 |
| 12 | CHITRADURGA | 778 | 825 | 1603 | 5 | 64 | 269 | 20 | 99 | 119 |
| 13 | DAKSHINA KANNADA | 225 | 659 | 884 | 7 | 158 | 268 | 17 | 64 | 81 |
| 14 | DAVANAGERE | 479 | 576 | 1055 | 6 | 124 | 301 | 57 | 206 | 263 |
| 15 | DHARWAD | 213 | 520 | 733 | 7 | 71 | 223 | 77 | 112 | 189 |
| 16 | GADAG | 183 | 398 | 581 | 7 | 40 | 147 | 49 | 87 | 136 |
| 17 | HASSAN | 1154 | 955 | 2109 | 1 | 42 | 162 | 26 | 117 | 143 |
| 18 | HAVERI | 447 | 678 | 1125 | 6 | 52 | 216 | 54 | 100 | 154 |
| 19 | KALBURGI | 751 | 935 | 1686 | 11 | 185 | 318 | 179 | 480 | 659 |
| 20 | KODAGU | 109 | 248 | 357 | 1 | 7 | 49 | 5 | 34 | 39 |
| 21 | KOLAR | 1124 | 606 | 1730 | 0 | 42 | 101 | 15 | 125 | 140 |
| 22 | KOPPAL | 362 | 520 | 882 | 2 | 30 | 65 | 115 | 112 | 227 |
| 23 | MANDYA | 667 | 794 | 1461 | 3 | 58 | 153 | 37 | 129 | 166 |
| 24 | MYSURU | 893 | 928 | 1821 | 6 | 103 | 244 | 58 | 182 | 240 |
| 25 | RAICHUR | 646 | 724 | 1370 | 8 | 42 | 86 | 124 | 273 | 397 |
| 26 | RAMANAGARA | 675 | 436 | 1111 | 2 | 23 | 94 | 21 | 62 | 83 |
| 27 | SHIVAMOGGA | 855 | 917 | 1772 | 4 | 85 | 232 | 37 | 151 | 188 |
| 28 | TUMAKURU | 1172 | 736 | 1908 | 1 | 43 | 211 | 26 | 124 | 150 |
| 29 | TUMAKURU MADHUGIRI | 685 | 520 | 1205 | 0 | 10 | 102 | 21 | 43 | 64 |
| 30 | UDUPI | 194 | 355 | 549 | 6 | 125 | 199 | 7 | 46 | 53 |
| 31 | UTTARA KANNADA | 435 | 471 | 906 | 3 | 10 | 95 | 7 | 27 | 34 |
| 32 | UTTARA KANNADA SIRSI | 584 | 498 | 1082 | 1 | 12 | 69 | 7 | 24 | 31 |
| 33 | VIJAYANAGARA | 386 | 540 | 926 | 3 | 41 | 118 | 76 | 145 | 221 |
| 34 | VIJAYAPURA | 788 | 989 | 1777 | 23 | 111 | 345 | 286 | 440 | 726 |
| 35 | YADAGIRI | 450 | 440 | 890 | 1 | 38 | 56 | 59 | 214 | 273 |
| | Grand Total | 19603 | 21676 | 41279 | 153 | 2361 | 6144 | 2124 | 5501 | 7625 |

ಅನುಬಂಧ – 02

| ರಾಜ್ಯದ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆಯ ಜಿಲ್ಲಾವಾರು ಪಟ್ಟಿ | | |
|---|---|---|
| ಕ್ರ ಸಂ | ಜಿಲ್ಲೆಯ ಹೆಸರು | ಶಾಲೆಗಳ ಸಂಖ್ಯೆ |
| 1 | BAGALKOT | 190 |
| 2 | BALLARI | 125 |
| 3 | BELAGAVI | 137 |
| 4 | BELAGAVI CHIKKODI | 194 |
| 5 | BENGALURU RURAL | 64 |
| 6 | BENGALURU U NORTH | 60 |
| 7 | BENGALURU U SOUTH | 91 |
| 8 | BIDAR | 167 |
| 9 | CHAMARAJANAGARA | 86 |
| 10 | CHIKKABALLAPURA | 111 |
| 11 | CHIKKAMANGALURU | 116 |
| 12 | CHITRADURGA | 115 |
| 13 | DAKSHINA KANNADA | 170 |
| 14 | DAVANAGERE | 135 |
| 15 | DHARWAD | 112 |
| 16 | GADAG | 115 |
| 17 | HASSAN | 241 |
| 18 | HAVERI | 155 |
| 19 | KALBURGI | 298 |
| 20 | KODAGU | 47 |
| 21 | KOLAR | 124 |
| 22 | KOPPAL | 185 |
| 23 | MANDYA | 215 |
| 24 | MYSURU | 233 |
| 25 | RAICHUR | 230 |
| 26 | RAMANAGARA | 107 |
| 27 | SHIVAMOGGA | 164 |
| 28 | TUMAKURU | 131 |
| 29 | TUMAKURU MADHUGIRI | 95 |
| 30 | UDUPI | 105 |
| 31 | UTTARA KANNADA | 49 |
| 32 | UTTARA KANNADA SIRSI | 76 |
| 33 | VIJAYANAGARA | 123 |
| 34 | VIJAYAPURA | 161 |
| 35 | YADAGIRI | 144 |
| Grand Total | | 4871 |

ಉಪನಿರ್ದೇಶಕರು (ಪ್ರೌಢ ಶಿಕ್ಷಣ)